ದಿನಾಂಕಃ 04-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ವಿ ಎಸ್ ವಕೀಲರಿಂದಃ**

ನಾನು ಡಿ ಡಿ ಎಲ್ ಆರ್ ರವರಿಂದ 11 ಇ ನಕ್ಷೆ ಪಡೆಯಲು ಆನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವುದಿಲ್ಲ ಆದರೆ ನೇರವಾಗಿ ಅರ್ಜಿ ನೀಡಿರುತ್ತೇನೆ. ಸಾಕ್ಷಿಗೆ ಈಗ ಒಂದು ನಕ್ಷೆಯನ್ನು ತೋರಿಸಲಾಗಿ ಸದರಿ ನಕ್ಷೆ ಜಮೀನನ್ನು ಅನ್ಯಕ್ರಾಂತ ಮಾಡಿಸಿದಾಗ ಆದ ನಕ್ಷೆ ಎಂದು ಒಪ್ಪಿರುತ್ತಾರೆ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ತೋರಿಸಿರುವ ಕೆಂಪು ಬಣ್ಣದ ಜಾಗ ಅನ್ಯಕ್ರಾಂತವಾದ ಜಾಗ 5 ಗುಂಟೆಯಾಗಿರುತ್ತದೆ. ಸದರಿ ಸ್ವತ್ತಿನ ದಕ್ಷಿಣಕ್ಕೆ ನನಗೆ ಸೇರಿದ 10 ಗುಂಟೆ ಇದೆ. ಅನ್ಯಕ್ರಾಂತವಾದ 5 ಗುಂಟೆ ಜಾಗದ ಉತ್ತರಕ್ಕೆ ನನಗೆ ಸೇರಿದ ಸ್ವತ್ತು ಇರುವುದಿಲ್ಲ. ನಿಡಿ-2 ರ ಸ್ಕೆಚ್ ತಪ್ಪಾಗಿರುತ್ತದೆ. ಸದರಿ ಸ್ಕೆಚ್ ನಿಂದ ತೊಂದರೆಯಾಗಿರುವುದಿಲ್ಲ ಆದ್ದರಿಂದ ಬದಲಾವಣೆ ಮಾಡಿಸಲು ಪ್ರಯತ್ನಿಸಿರುವುದಿಲ್ಲ. ಸದರಿ ನಕ್ಷೆಯನ್ನು ನಗರ ಯೋಜನಾ ಪ್ರಾಧಿಕಾರಕ್ಕೆ ನೀಡಿರುತ್ತೇನೆ. ನನಗೆ ಆದ ಕ್ರಯಪತ್ರದಲ್ಲಿ ರಸ್ತೆ ಮಾರ್ಜಿನ್ ಕಳೆದು ಉಳಿದ ಸ್ವತ್ತನ್ನು ಮಾರಾಟ ಮಾಡಲಾಗುತ್ತಿದೆ ಎಂದು ನಮೂದು ಇಲ್ಲಾ.

ನಿಪಿ-15 ರಲ್ಲಿ ಕಾಣುವ ಮರವಂಜಿ ರಸ್ತೆಯಿಂದ ಕೆಳಗೆ ಕಾಣುವ ಜಾಗ ಸಂಪೂರ್ಣ 5 ಗುಂಟೆ ಇರುತ್ತದೆ. ರೋಡ್ ಮಾರ್ಜಿನ್ ಮತ್ತು ವೆಹಿಕಲ್ ಪಾರ್ಕಿಂಗ್ ಎಂದು ನಮೂದಿಸಿರುವ ಜಾಗವೂ 5 ಗುಂಟೆಯಲ್ಲಿ ಬರುತ್ತದೆ. ನಿಪಿ-12 ರಂತೆ 141.68 ಚದರ ಮೀಟರ್ ಅನ್ನು ರಸ್ತೆಗೆ ಬಿಟ್ಟುಕೊಟ್ಟಿರುತ್ತೇನೆ. 15 ಗುಂಟೆ ಹೊರತುಪಡಿಸಿ ನನಗೆ ಬೇರೆ ಸ್ವತ್ತು ಇರುವುದಿಲ್ಲ. ನಾನು ಕ್ರಯಕ್ಕೆ ಪಡೆಯುವ ಮೊದಲು 1 ಎಕರೆ 2 ಗುಂಟೆ ಎಂದು ಪಹಣಿಯಲ್ಲಿ ನಮೂದು ಇತ್ತು. ನಾನು ಕ್ರಯಕ್ಕೆ ಪಡೆಯುವಾಗ ಪಹಣಿಯಲ್ಲಿ 1 ಎಕರೆ 4 ಗುಂಟೆ ಎಂದು ನಮೂದು ಇತ್ತು ಎಂದರೆ ಸರಿಯಲ್ಲ. ಮಲ್ಲೇಶ್ವರ ಮರವಂಜಿ ರಸ್ತೆಯ ನಂತರ ನಾನು ಕ್ರಯಕ್ಕೆ ಪಡೆದ 15 ಗುಂಟೆಯಲ್ಲಿ ಅನ್ಯಕ್ರಾಂತವಾದ 5 ಗುಂಟೆಗೆ ರಸ್ತೆ ಮಾರ್ಜಿನ್ ಸಹ ಹೋಗಿರುತ್ತದೆ. ರೋಡ್ ಮಾರ್ಜಿನ್ ಮತ್ತು ವೆಹಿಕಲ್ ಪಾರ್ಕಿಂಗ್ ಹೋಗಿದ್ದರಿಂದ ನಾನು 5 ಗುಂಟೆಗಾಗಿ ದಕ್ಷಿಣ ಭಾಗದಲ್ಲಿ ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಕ್ಷಿಣ ಭಾಗದಲ್ಲಿ ಪ್ರತಿವಾದಿಗೆ ಸೇರಿದ 2 ರಿಂದ 3 ಗುಂಟೆ ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಾನು ಮಾಡುತ್ತಿರುವ ಒತ್ತುವರಿಯನ್ನು ತಡೆದಿದ್ದರಿಂದ ಅವರ ವಿರುದ್ದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. 11 ಇ ನಕ್ಷೆ ಮತ್ತು ಅನ್ಯಕ್ರಾಂತದ ವಿರುದ್ದ ನಿಡಿ-2 ನ್ನು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-15 ನ್ನೂ ಸಹ 11 ಇ ನಕ್ಷೆ ಮತ್ತು ಅನ್ಯಕ್ರಾಂತದ ವಿರುದ್ದ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇಲ್ಲ</u>**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.